ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
DSERT NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374 Fax:26422377

ಸಂಖ್ಯೆ: ನಲಿ-ಕಲಿ/ಅನುಷ್ಠಾನ/ SRG/01/2015-16 ದಿನಾಂಕ: 01/07/2015

## ಜ್ಞಾಪನ

ವಿಷಯ: ನಲಿ-ಕಲಿ ಕಾರ್ಯಕ್ರಮದ ಪರಿಣಾಮಕಾರಿಯಾಗಿ ಶಾಲೆಗಳಲ್ಲಿ ಅನುಷ್ಠಾನ ಕುರಿತು.
ಉಲ್ಲೇಖ: ದಿನಾಂಕ: 23/05/2015 ರಂದು ಡಿ.ಎಸ್.ಇ.ಆರ್.ಟಿ ಯಲ್ಲಿ ನಡೆದ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ.

ಮೇಲಿನ ವಿಷಯ ಹಾಗೂ ಉಲ್ಲೇಖದ ಅನುಸಾರ, ಪ್ರಸ್ತುತ ಶಾಲೆಗಳಲ್ಲಿ ನಲಿ-ಕಲಿ ಯೋಜನೆ ಪರಿಣಾಮಕಾರಿಯಾಗಿ ಆಗುತ್ತಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಸದಸ್ಯರು ಹಂಚಿಕೊಂಡ ಎಲ್ಲಾ ವಿಚಾರಗಳನ್ನು ವಿವರವಾಗಿ ಪರಾಮರ್ಶೆ ನಡೆಸಿ ತರಗತಿ ಕೋಣೆಗಳಲ್ಲಿ ಈ ಯೋಜನೆ ಪರಿಣಾಮಕಾರಿ ಆಗುವ ಕುರಿತು ಸಲಹೆ ಸೂಚನೆಗಳನ್ನು ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿದೆ.

1. 1,2 ಮತ್ತು 3ನೇ ತರಗತಿಗಳ ನಿರ್ವಹಣೆ ವಿಚಾರದಲ್ಲಿ ಶಾಲಾ ಮುಖ್ಯಸ್ಥರು ಆ ಶಾಲೆಯಲ್ಲಿನ ಪರಿಸ್ಥಿತಿಗನುಗುಣವಾಗಿ ಅಂದರೆ ಮಕ್ಕಳ ಸಂಖ್ಯೆ ಮತ್ತು ಶಿಕ್ಷಕರ ಸಂಖ್ಯೆ ಕಡಿಮೆ ಇದ್ದಲ್ಲಿ ಮೂರು ತರಗತಿಗಳನ್ನು ನಲಿ-ಕಲಿ ಮೂಲ ಧ್ಯೇಯದಂತೆ ಒಟ್ಟುಗೂಡಿಸಿ ಬೋಧನೆ ಮಾಡುವುದು. ಮಕ್ಕಳು ಮತ್ತು ಶಿಕ್ಷಕರ ಸಂಖ್ಯೆ ಹೆಚ್ಚು ಇದ್ದಲ್ಲಿ 3ನೇ ತರಗತಿಯನ್ನು ಮಾತ್ರ ಪ್ರತ್ಯೇಕಿಸಿಕೊಂಡು ನಲಿ-ಕಲಿ ಮಾದರಿಯಲ್ಲಿ ಬೋಧನೆ ಮಾಡಲು ಕ್ರಮ ಕೈಗೊಳ್ಳುವುದು.
2. ಶಾಲೆಗಳಲ್ಲಿ ನಲಿ-ಕಲಿ ತರಬೇತಿ ಪಡೆದ ಒಂದಕ್ಕಿಂತ ಹೆಚ್ಚು ಶಿಕ್ಷಕರಿದ್ದಲ್ಲಿ, ವಿಷಯಗಳನ್ನು ಹಂಚಿಕೆ ಮಾಡಿಕೊಂಡು ಅಂದರೆ ಭಾಷೆ, ಗಣಿತ, ಇಬ್ಬರು ಶಿಕ್ಷಕರು ಪರಿಸರ ಅಧ್ಯಯನ ಮತ್ತು ಆಂಗ್ಲಭಾಷೆಯನ್ನು ಮತ್ತೊಬ್ಬರು ತೆಗೆದುಕೊಂಡು ನಲಿ-ಕಲಿ ತರಗತಿಗಳನ್ನು ನಿರ್ವಹಿಸುವುದು. ಎಲ್ಲಾ ವಿಷಯಗಳನ್ನು ಒಬ್ಬರೇ ನಿರ್ವಹಿಸುವ ಕ್ರಮ ತಪ್ಪಬೇಕು.
3. ಪ್ರತಿ ತಿಂಗಳು ನಲಿ-ಕಲಿ ತರಗತಿ ನಿರ್ವಹಿಸುತ್ತಿರುವ ಶಿಕ್ಷಕರು ಪ್ರತ್ಯೇಕವಾದ ಸಮಾಲೋಚನಾ ಸಭೆಯನ್ನು Cluster ಹಂತದಲ್ಲಿ ನಡೆಸುವುದು. ಶಿಕ್ಷಕರ ಸಂಖ್ಯೆ ಕಡಿಮೆಯಾಗುವಂತಿದ್ದಲ್ಲಿ 2-3 ಕ್ಲಸ್ಟರ್‌ಗಳನ್ನು ಜೊತೆಗೂಡಿಸಿ ಹೋಬಳಿ ಮಟ್ಟದಲ್ಲಿ ಸಮಾಲೋಚನಾ ಸಭೆ ನಡೆಸುವುದು. ಸಭೆಯಲ್ಲಿ ನಲಿ-ಕಲಿ ವಿಷಯದಲ್ಲಿ ಪರಿಣಿತ ಸಂಪನ್ಮೂಲ ವ್ಯಕ್ತಿಗಳ ನೇತೃತ್ವದಲ್ಲಿ BRC ಗಳು ಸಭೆ ನಡೆಸುವುದು. ಸಭೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು. ಈ ಕುರಿತು ವಿವರವಾದ ನಡಾವಳಿ ದಾಖಲಿಸಿ ಉಪನಿರ್ದೇಶಕರು/ಡಯಟ್ ಪ್ರಾಂಶುಪಾಲರಿಗೆ ನೀಡುವುದು. BEO ಗಳು ನಡಾವಳಿಯನ್ನು ಆಧರಿಸಿ ತೆಗೆದುಕೊಂಡ ಕ್ರಮವನ್ನು ವರದಿ ಮಾಡುವುದು.
4. ನಲಿ-ಕಲಿ ನಿರ್ವಹಣೆ ಮಾಡಲು ಅಂದರೆ ಅಗತ್ಯವಾದ ಕಲಿಕಾ ಸಾಮಗ್ರಿ ತಯಾರಿಸಲು ಚಪ್ಪರ ನಿರ್ವಹಣೆ ಮಾಡಲು ಅನುಕೂಲವಾಗುವಂತೆ ಶಾಲಾ ಅನುದಾನ ಅಥವಾ ಶಾಲೆಯಲ್ಲಿರುವ ಸಂಚಿತ ನಿಧಿಯಲ್ಲಿ ರೂ. 500 (ಐನೂರು ಮಾತ್ರ) ಒಂದು ಬಾರಿ ಮಾತ್ರ ಖರ್ಚು ಮಾಡಲು ಅನುಮತಿ ನೀಡಿದ್ದು, ಈ ಕುರಿತು ಶಾಲೆಗಳಿಗೆ ನಿರ್ದೇಶನ ನೀಡುವುದು.
5. ಜುಲೈ, ಸೆಪ್ಟೆಂಬರ್, ಫೆಬ್ರವರಿ ತಿಂಗಳಲ್ಲಿ ನಲಿ-ಕಲಿ ಯೋಜನೆ ಕುರಿತಂತೆ ಸಾಧಕ ಬಾಧಕಗಳನ್ನು ಚರ್ಚಿಸಲು ಅನುಕೂಲವಾಗುವಂತೆ Teleconference ವ್ಯವಸ್ಥೆ ಮಾಡಲಾಗುವುದು. ಈ ಕುರಿತು BRC ಕೇಂದ್ರಗಳಲ್ಲಿರುವ ಸ್ವೀಕೃತಿ ಕೇಂದ್ರಗಳನ್ನು ಸಿದ್ಧ ಪಡಿಸಿಕೊಳ್ಳಲು ಕ್ರಮಕೈಗೊಳ್ಳುವುದು.
6. ನಲಿ-ಕಲಿ ಕುರಿತಾದ ಸಮಸ್ಯೆಗಳಿಗೆ ಪರಿಹಾರ ನೀಡಲು ಸಹಾಯವಾಣಿ ನೀಡಲಾಗುತ್ತಿತ್ತು. ಪ್ರಸ್ತುತ BRC ಕಛೇರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಪರಿಹಾರ ಪಡೆಯಲು ಒಬ್ಬ BRP ಗೆ ಜವಾಬ್ದಾರಿ ನೀಡುವುದಲ್ಲದೆ,

ತಾಲ್ಲೂಕಿನಲ್ಲಿರುವ ಹಾಗೂ ಜಿಲ್ಲೆಗಳಲ್ಲಿ ನಲಿ-ಕಲಿ ಸಂಪನ್ಮೂಲ ಕೇಂದ್ರದ ದೂರವಾಣಿ ಸಂಖ್ಯೆಗಳನ್ನು ಶಿಕ್ಷಕರಿಗೆ ನೀಡಿ ಅವರಿಂದ ಸಲಹೆ ಸೂಚನೆ ಪಡೆಯಲು ಕ್ರಮ ತೆಗೆದುಕೊಳ್ಳಬಹುದು. ನಲಿ-ಕಲಿ ಸಂಪನ್ಮೂಲ ವ್ಯಕ್ತಿಗಳ ದೂರವಾಣಿ ಸಂಖ್ಯೆಗಳು ಎಲ್ಲಾ ಶಾಲೆಗಳಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು.

7. ಈ ಹಿಂದೆ ನಿಗಧಿ ಪಡಿಸಿದಂತೆ ಡಯಟ್‌ಗಳಲ್ಲಿ DRG (ಜಿಲ್ಲಾ ಸಂಪನ್ಮೂಲ ತಂಡ) ಮತ್ತು ಬ್ಲಾಕ್‌ಗಳಲ್ಲಿ BRG (ಬ್ಲಾಕ್ ಸಂಪನ್ಮೂಲ ತಂಡಗಳು) ಪ್ರತಿ ತಿಂಗಳು ಸಭೆ ಸೇರಿ ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಚರ್ಚಿಸಿ, ಪರಿಹಾರ, ಸಲಹೆ ಸೂಚನೆ ನೀಡುವುದು. ಕಡ್ಡಾಯವಾಗಿ ನಡೆಯುವಂತೆ ಕ್ರಮ ಕೈಗೊಳ್ಳುವುದು ಹಾಗೂ ಈ ಎರಡೂ ತಂಡಗಳು ಬಲವರ್ಧನೆ ಆಗಬೇಕು.
8. ಕೆಲವು ಕಾರ್ಡುಗಳನ್ನು ಪದೇ ಪದೇ ಬಳಸುತ್ತಿರುವುದರಿಂದ ಬಹುಬೇಗ ಹಾಳಾಗುವ ಸಾಧ್ಯತೆ ಇರಬಹುದು. ಸಭೆಯಲ್ಲಿ ಚರ್ಚಿಸಿ ಅಂತಹ ಕಾರ್ಡುಗಳನ್ನು Lamination ಮಾಡಿಸಿಕೊಂಡಲ್ಲಿ ಹಾಳಾಗುವ ಪರಿಸ್ಥಿತಿ ಬರುವುದಿಲ್ಲವೆಂದು, ನೀಡಿದ ಸಲಹೆಯಂತೆ ತರಗತಿಗಳಲ್ಲಿ ಪದೇ ಪದೇ ಬಳಸುವ ಕಾರ್ಡುಗಳನ್ನು ಲ್ಯಾಮಿನೇಷನ್ ಮಾಡಿಸುವುದು. ಚೀಲಗಳಲ್ಲಿ ಕಾರ್ಡುಗಳನ್ನು ಹಾಕುವುದರಿಂದ ಪೂರ್ಣವಾಗಿ ಮಡಿಚಿಕೊಳ್ಳುತ್ತಿದ್ದು, ಪೂರ್ಣವಾಗಿ ಮಾಡಿಕೊಂಡಿರುವ ವ್ಯವಸ್ಥೆ ಬಗ್ಗೆ ಚರ್ಚಿಸಿ ಅವುಗಳನ್ನು ವಾರಕ್ಕೊಮ್ಮೆ ಹಿಂದೆ ಮುಂದೆ ಮಾಡಿ ಇಡುವ ಬಗ್ಗೆ ಭೇಟಿವೇಳೆಯಲ್ಲಿ ಮಾರ್ಗದರ್ಶನ ನೀಡಲು ಕ್ರಮಕೈಗೊಳ್ಳುವುದು.
9. ಕಲಿಕಾ ಚಪ್ಪರದಲ್ಲಿ ಮಕ್ಕಳು ತಯಾರಿಸಿದ ಚಿತ್ರಗಳು, ಬರಹಗಳು ಇರಬೇಕಾಗಿದ್ದು, ಕೆಲವು ಶಾಲೆಗಳಲ್ಲಿ ಹಾಳಾದ ಧೂಳು ತುಂಬಿದ ಚಿತ್ರಗಳು, ಬರಹಗಳು ಇರುವುದಾಗಿ ಚರ್ಚಿಸಿ ಅವುಗಳನ್ನು ಪ್ರತಿ ವರ್ಷ ಕಡ್ಡಾಯವಾಗಿ ಬದಲಾಯಿಸಿ ಆಯಾ ತಿಂಗಳು ತಯಾರಿಸಿದವುಗಳನ್ನೇ ಹಾಕುವುದು. ಹಳೆಯದು ಇದ್ದಲ್ಲಿ ಪೂರ್ಣ ಬದಲಾಯಿಸಲು ಕ್ರಮ ಕೈಗೊಳ್ಳುವುದು. Wall Slate ಗಳನ್ನು ಕಡ್ಡಾಯವಾಗಿ ಬಳಕೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು.
10. ಉರ್ದು ಶಾಲೆಗಳಲ್ಲಿ ಪ್ರಸ್ತುತ 1 ಮತ್ತು 2ನೇ ತರಗತಿಗೆ ನಲಿ-ಕಲಿ ಯೋಜನೆ ಇದ್ದು, ಉರ್ದು ಶಾಲೆ ಶಿಕ್ಷಕರಿಗೆ ಸಂಬಂಧಿಸಿದಂತೆ ಸಮಾಲೋಚನಾ ಸಭೆಗಳನ್ನು ಪ್ರತ್ಯೇಕವಾಗಿ ನಡೆಸಬೇಕು. ಯಾವುದೇ ಕಾರಣಕ್ಕೂ ಕನ್ನಡ ಶಿಕ್ಷಕರ ಜೊತೆ ಸೇರಿಸಬಾರದು. ಉರ್ದು ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ಸಮಾಲೋಚನಾ ಸಭೆ ನಡೆಸುವ ರೀತಿಯಲ್ಲಿ BRG ಮತ್ತು CRG ಸಭೆಗಳು ಉರ್ದು ನಲಿ-ಕಲಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ನಡೆಸಿ, ಪ್ರತ್ಯೇಕ ನಡಾವಳಿ ದಾಖಲು ಮಾಡಿದ ಬಗ್ಗೆ ವಿವರ ನೀಡುವುದು. ಸಮಸ್ಯೆಗಳ ಬಗ್ಗೆ ವರದಿ ಮಾಡುವುದು.
ಉರ್ದು ಸಂಪನ್ಮೂಲ ವ್ಯಕ್ತಿಗಳ ದೂರವಾಣಿ ಸಂಖ್ಯೆಗಳು ಉರ್ದು ಶಾಲೆಗಳಲ್ಲಿರುವಂತೆ ವ್ಯವಸ್ಥೆ ಮಾಡಬೇಕು. ಉರ್ದು ಶಾಲೆಗಳಲ್ಲಿ ನಲಿ-ಕಲಿ ತರಗತಿಗಳಲ್ಲಿ ಚಪ್ಪರ, ಕಾರ್ಡುಗಳು ಇತ್ಯಾದಿ ತಯಾರಿಸುವಾಗ ಈವರೆವಿಗೆ ಯಾವುದೇ ಅನುದಾನ ನೀಡಿರುವುದಿಲ್ಲವೆಂದು ತಿಳಿದಿದ್ದು, ಇದಕ್ಕೆ ಸಂಬಂಧಿಸಿದಂತೆ ಶಾಲಾ ಸಂಚಿತ ನಿಧಿಯಿಂದ ಶಾಲಾ ಅನುದಾನದಲ್ಲಿ ರೂ. 2000/- (ಎರಡು ಸಾವಿರ ರೂಪಾಯಿಗಳು) ಬಳಸಲು ಒಂದು ಬಾರಿಗೆ ಮಾತ್ರ ಅನುಮತಿ ನೀಡಲಾಗಿದ್ದು, ಅದನ್ನು ಬಳಸಿಕೊಂಡು ಅಗತ್ಯ ಕಲಿಕಾ ಪರಿಕರಣಗಳನ್ನು ಕೊಳ್ಳಲು ಕ್ರಮಕೈಗೊಳ್ಳಲು ಸೂಚಿಸಿದೆ.
11. ಸಮಾಲೋಚನಾ ಸಭೆಗಳು ಬೆಳ್ಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ ಕಡ್ಡಾಯವಾಗಿ ನಡೆಯುವಂತೆ BEO/BRC ಗಳು ಕ್ರಮಕೈಗೊಳ್ಳಲು ಸೂಚಿಸಿದೆ.

(ಜಯಕುಮಾರ್.ಎಸ್)
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

ಪ್ರತಿಯನ್ನು ಸಲ್ಲಿಸಿದೆ.

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು-01.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಪ್ರತಿಯನ್ನು ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಕಳುಹಿಸುತ್ತಾ ತಮ್ಮ ಜಿಲ್ಲಾ ವ್ಯಾಪ್ತಿಯ ಬಿ.ಇ.ಓ ಹಾಗೂ ಬಿ.ಆರ್.ಸಿ ಗಳಿಗೆ ಈ ಮಾಹಿತಿ ನೀಡಿ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಕೈಗೊಳ್ಳುವುದು.

\\P4comp55\p4comp55\y15-16\nali-kali implimetatiion.doc